ಶ್ರೀ ಹೆಚ್.ಕೆ.ಪಾಟೀಲ್ :- ಮಾನ್ಯ ಅಧ್ಯಕ್ಷರೇ, ಈ ಲಿಂಕ್ ಕೆನಾಲ್ ಟನಲ್ ನಿರ್ಮಾಣ ಮಾಡುವುದರಲ್ಲಿ ಅವ್ಯವಹಾರ ಆಗಿದೆ ಎಂದು ಬಹಳಷ್ಟು ದೂರುಗಳು ಸರ್ಕಾರಕ್ಕೆ ಬಂದಿದ್ದವು. ಆ ದೂರುಗಳ ಹಿನ್ನೆಲೆಯಲ್ಲಿ ನಾವು ಈಗಾಗಲೇ ತನಿಖೆಗೆ ಆದೇಶ ಮಾಡಿದ್ದೇವೆ. ಅವರು ನಮಗೆ ಇಂಟರ್‌ನಲ್ ರಿಪೋರ್ಟನ್ನು ಸಹಿತ ಕೊಟ್ಟಿದ್ದರು. ಆ ಇಂಟೀರಿಯರ್ ರಿಪೋರ್ಟ್ ಮೇಲೆ ಅಲ್ಲಿ ಸರ್ಕಾರದ ಪರವಾನಗೆ ಇಲ್ಲದೇ 7 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು ನಮ್ಮ ಗಮನಕ್ಕೆ ಬಂದಮೇಲೆ ಸಂಬಂಧ ಪಟ್ಟ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರನ್ನು ನಾವು ಈಗಾಗಲೇ ಸಸ್ಪೆಂಡ್ ಮಾಡಿದ್ದೇವೆ. ಹಾಗೂ ಈ ಬಗ್ಗೆ ತನಿಖೆ ಮುಂದುವರೆದಿದೆ.

ಭಾಲ್ಕಿ ತಾಲ್ಲೂಕಿನ ಕುಂಟೆ ಸಿರಸಿ ಗ್ರಾಮದಲ್ಲಿ ನಡೆದ ಬಾಲಕನ ಭೀಕರ ಹತ್ಯೆ ಬಗ್ಗೆ

396(3579) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) :- ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ ?

1. ಭಾಲ್ಕಿ ತಾಲ್ಲೂಕಿನ ಕುಂಟೆ ಸಿರಸಿ ಗ್ರಾಮದ ಬಾಲಕನೊಬ್ಬನನ್ನು ಎರಡು ತಿಂಗಳ ಹಿಂದೆ ಭಾಲ್ಕಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಹಾಡು ಹಗಲಲ್ಲೇ ಭೀಕರವಾಗಿ ಹತ್ಯೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಅ) ಹಾಗಿದ್ದಲ್ಲಿ ಈ ಹತ್ಯೆಯ ಸಂಬಂಧವಾಗಿ ಎಷ್ಟು ಜನರ ಮೇಲೆ ದೂರನ್ನು ದಾಖಲೆ ಮಾಡಿಕೊಳ್ಳಲಾಯಿತು,

ಆ) ಈ ಹತ್ಯೆ ನಡೆದ ನಂತರ ಅಪರಾಧಿಯನ್ನು ಪೊಲೀಸರು ಗುರುತಿಸಿದ್ದು ಅಪರಾಧಿಯು ರಾಜಾರೋಷವಾಗಿ ಓಡಾಡುತ್ತಿದ್ದರೂ ಇದುವರೆವಿಗೂ ಅಪರಾಧಿಯನ್ನು ಬಂಧಿಸದೇ ಇರಲು ಕಾರಣವೇನು? ಪೊಲೀಸ್ ಇಲಾಖೆಯ ಕೆಲವು ಅಧಿಕಾರಿಗಳು ಅಪರಾಧಿಗೆ ಸಹಾಯ ಮಾಡುತ್ತಿರುವುದರಿಂದ ಈ ಬಂಧನ ಸಾಧ್ಯವಾಗದೇ ಇರುವುದು ನಿಜವಲ್ಲವೆ?

ಇ) ಇಲ್ಲದಿದ್ದಲ್ಲಿ ಅಪರಾಧಿಯನ್ನು ಕೂಡಲೇ ಬಂಧಿಸಿ ಈ ಪ್ರಕರಣವನ್ನು ಸಮಗ್ರವಾಗಿ ತನಿಖೆ ನಡೆಸಲು ಸಿ.ಓ.ಡಿ.ಗೆ ಒಪ್ಪಿಸಲಾಗುವುದೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :-

1. ಹೌದು

ಅ) ಈ ಸಂಬಂಧದಲ್ಲಿ ಬಾಲ್ಕಿ ನಗರ ಪೊಲೀಸ್ ಠಾಣೆಯ ಅಪರಾದ ಸಂಖ್ಯೆ 87:2000 ಕಲಂ302 ಐಪಿಸಿ ಪ್ರಕಾರ ತನಿಖೆ ಕೈಗೊಳ್ಳಲಾಗಿದೆ. ತನಿಖೆಯಿಂದ (1) ಭೀಮಶ್ಯ (2) ಚಂದ್ರಕಾಂತ ಇವರುಗಳು ಈ ಅಪರಾಧವನ್ನು ಎಸಗಿದ್ದಾರೆ ಎಂದು ಕಂಡು ಬಂದಿದೆ.

ಆ) ಕೊಲೆಗೆ ಸಂಬಂಧಿಸಿದ ಇಬ್ಬರು ಆರೋಪಿತರ ಪೈಕಿ ಒಬ್ಬರಾದ ಚಂದ್ರಕಾಂತ ಉರ್ಫ್ ಚಂದ್ರು ಈತನನ್ನು ದಿನಾಂಕ 1-8-2000 ಬಂಧಿಸಲಾಗಿದೆ. ಇನ್ನೊಬ್ಬ ಆರೋಪಿ ಭೀಮಶ್ಯ ಈತನು ಕೃತ್ಯವೆಸಗಿದ ದಿನಾಂಕದಿಂ ತಲೆ ಮರೆಸಿಕೊಂಡಿದ್ದು ಆತನ ಪತ್ತೆಗಾಗಿ ಶೋಧನೆ ನಡೆಸಲಾಗಿದೆ. ಕೊಲೆಗೆ ಸಂಬಂಧಿಸಿದ ಅಪರಾಧಿ ರಾಜಾರೋಷವಾಗಿ ಅಡ್ಡಾಡುತ್ತಿದ್ದಾನೆ, ಕೆಲವು ಪೊಲೀಸ್ ಅಧಿಕಾರಿಗಳು ಆತನಿಗೆ ಸಹಾಯ ಮಾಡುತ್ತಿದ್ದಾರೆಂಬ ವಿಷಯ ಸತ್ಯಕ್ಕೆ ದೂರವಾಗಿದೆ.

ಇ) ತಲೆಮರೆಸಿಕೊಂಡಿರುವ ಆರೋಪಿಯ ಪತ್ತೆ ಗಾಗಿ ಪೊಲೀಸ್ ಅಧಿಕಾರಿಗಳ ತಂಡವೊಂದನ್ನು ರಚಿಸಲಾಗಿದೆ. ಶೀಘ್ರದಲ್ಲಿಯೇ ಪ್ರಕರಣವನ್ನು ಪೂರ್ಣಗೊಳಿಸಿ, ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗುವುದು. ತನಿಖೆಯು ಈ ಗಾಗಲೇ ಮುಕ್ತಾಯ ಹಂತದಲ್ಲಿರುವುದರಿಂದ ಮುಂದಿನ ತನಿಖೆಯನ್ನು ಸಿ.ಓ.ಡಿ.ಗೆ ವಹಿಸಿಕೊಡುವುದು ಸೂಕ್ತವಲ್ಲ.

ಶ್ರೀ ಪ್ರಕಾಶ್ ಖಂಡ್ರೆ :- ಮಾನ್ಯ ಅಧ್ಯಕ್ಷರೆ, ಭಾಲ್ಕಿ ತಾಲ್ಲೂಕು ಇಂಜಿನಿಯರ್ ಕಾಲೇಜು ಎದುರುಗಡೆ ಕುಂಟೆ ಸಿರಸಿ ಗ್ರಾಮದ ಒಬ್ಬ ಬಾಲಕನನ್ನು ಸಂಜೆ 4 ಗಂಟೆಯ ಸಮಯದಲ್ಲಿ ಮರ್ಡರ್ ಮಾಡಿದ್ದಾರೆ. ಮರ್ಡರ್ ಮಾಡಿರುವ ಆರೋಪಿಯ ಹೆಸರು ಭೀಮಶ್ಯ ಎಂದು. ಇವನು ಮೊದಲನೆ ಆರೋಪಿ. ಇವನನ್ನು ಇವತ್ತಿನವರೆಗೂ ಪೊಲೀಸರು ಹಿಡಿದಿಲ್ಲ. ಅವರು ಮರ್ಡರ್ ಮಾಡಿ ಎರಡು ತಿಂಗಳಾಯಿತು. ಆರೋಪಿಗಳು ಭಾಲ್ಕಿಯಲ್ಲೇ ಓಡಾಡುತ್ತಿದ್ದಾರೆ. ಇವರಿಗೆ ಯಾರು ಸಹಾಯ ಮಾಡುತ್ತಿದ್ದಾರೆ? ಇವರಿಗೆ ಯಾರು ಕುಮ್ಮಕ್ಕು ಕೊಡುತ್ತಿದ್ದಾರೋ ಗೊತ್ತಿಲ್ಲ. ಇದರ ಬಗ್ಗೆ ನಾನು ಎಸ್.ಪಿ.-ಯವರ ಜೊತೆಯಲ್ಲಿ ಮಾತನಾಡಿದ್ದೇನೆ. ಡಿಜಪಿಯವರನ್ನು ಭೇಟಿ ಮಾಡಿದ್ದೇನೆ. ಇದರ ಬಗ್ಗೆ ಮಾನ್ಯ ಗೃಹ ಸಚಿವರು ಈ ಪ್ರಕರಣವನ್ನು ಸಿ.ಓ.ಡಿ. ತನಿಖೆಗೇನಾದರೂ ಒಪ್ಪಿಸುತ್ತೀರಾ ಎಂದು ಕೇಳಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ಜುಲೈ ತಿಂಗಳಲ್ಲಿ ಈ ಮರ್ಡರ್ ಆಗಿದ್ದು. 10-12 ದಿವಸಗಳಲ್ಲಿಯೇ ಇಬ್ಬರು ಆರೋಪಿಗಳ ಪೈಕಿ ಒಬ್ಬ ಆರೋಪಿಯನ್ನು ಈಗಾಗಲೇ ಈಗಾಗಲೇ ಪೋಲೀಸರು ಹಿಡಿದಿದ್ದಾರೆ. ಭೀಮಶ್ಯ ಮತ್ತು ಚಂದ್ರಕಾಂತ್ ಎನ್ನುವವರು ಇಬ್ಬರು ಆರೋಪಿಗಳು. ಇಬ್ಬರ ಪೈಕಿ ಚಂದ್ರಕಾಂತ್ ಎನ್ನುವವನನ್ನು ಈಗಾಗಲೇ ಪೋಲಿಸರು ಬಂಧಿಸಿದ್ದಾರೆ. ಮತ್ತು ಅವನು ಪೊಲೀಸ್ ಕಸ್ಟಡಿಯಲ್ಲಿದ್ದಾನೆ. ಭೀಮಶ್ಯ ಎನ್ನುವವನನ್ನು ಇನ್ನೂ ಪತ್ತೆ ಹಚ್ಚಿಲ್ಲ. ಇದರ ಬಗ್ಗೆ ಈಗಾಗಲೇ ಒಂದು ಪೋಲೀಸ್ ಟೀಮನ್ನು ಕಾನ್ಸ್ಟಿಟ್ಯೂಟ್ ಮಾಡಿ ಆದಷ್ಟು ಬೇಗನೆ ಅವನನ್ನು ವಶಪಡಿಸಿಕೊಳ್ಳಬೇಕೆಂದು ಪೋಲೀಸರು ಅವನ ಶೋಧನೆಯನ್ನು ನಡೆಸಿದ್ದಾರೆ. ನಾನು ಮಾನ್ಯ ಸದಸ್ಯರಿಗೆ ವಿಶ್ವಾಸ ಕೊಡುತ್ತೇನೆ. ಆದಷ್ಟು ಬೇಗನೆ ಭಿಮಶ್ಯ ಎನ್ನುವ ಇನ್ನೊಬ್ಬ ವ್ಯಕ್ತಿ ಏಲ್ಲಿದ್ದಾನೆ, ಅವನನ್ನು ಕೂಡ ಬಂಧಿಸುವ ಸರ್ವ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಇಲ್ಲಿ ಮಹತ್ವದ ವಿಷಯವೇನೆಂದರೆ ಚಂದ್ರಕಾಂತ್ ಎನ್ನುವ ಆರೋಪಿಯನ್ನು ಬಂಧಿಸಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಭೀಮಶ್ಯ ಎನ್ನುವ ಆರೋಪಿ ಅವನ ಜೊತೆಯಲ್ಲಿದ್ದವನು. ಇವತ್ತು ಕೂಡ ಭಾಲ್ಕಿಯಲ್ಲಿಯೇ ಅವನು ಓಡಾಡುತ್ತಿದ್ದಾನೆ. ಇವತ್ತಿನವರೆಗೂ ಅವನನ್ನು ಅರೆಸ್ಟ್ ಮಾಡಿಲ್ಲ. ಈರೀತಿ ಓಪನ್ ಆಗಿ ಓಡಾಡುವುದಕ್ಕೆ ಬಿಟ್ಟಿರುವ ಪೋಲೀಸ್ ನಿಷ್ಕ್ರಿಯತೆಯಿಂದ ಮತ್ತೆ ಅವನ ಜೊತೆಯಲ್ಲಿರುವ ಸಂಗಡಿಗರು ಮೂರು-ನಾಲ್ಕು ಜನ, ಸುಭಾಷ್ ಖೇಡ್, ಆನಂದ್, ದೇವಪ್ಪ, ಜಗನ್ನಾಥ್, ಇವರುಗಳು ಒಬ್ಬ ಸಮಾಜ ಸೇವಕರಾದ ಓಂ ಪ್ರಕಾಶ್ ರೊಟ್ಟಿ ಅವರ ಮೇಲೆ ಈಗಾಗಲೇ ಅಟೆಂಪ್ಟ್-ಟು-ಮರ್ಡರ್ ಎರಡು ಸಲ ಮಾಡಿದ್ದಾರೆ. 25-9-2000ರಲ್ಲಿ ಒಂದು ಸಲ ಅಟೆಂಪ್ಟ್-ಟು-ಮರ್ಡರ್ ಮಾಡಿದ್ದಾರೆ ಹಾಗೂ ಮತ್ತೊಂದು ಸಲ 16-10-2000 ರಲ್ಲಿ ಅಟೆಂಪ್ಟ್-ಟು-ಮರ್ಡರ್ ಮಾಡಿದ್ದಾರೆ. ಹೀಗಾಗಿ ಆ ಭೀಮಶ್ಯ ಓಪನ್ ಆಗಿ ಓಡಾಡುವುದರಿಂದ

ಅವನ ಗ್ಯಾಂಗ್‌ನವರು ಬೇರೆ ಬೇರೆ ಸಮಾಜ ಸೇವಕರಿಗೆ, ರಾಜಕೀಯದಲ್ಲಿರುವ ವ್ಯಕ್ತಿಗಳಿಗೆ ತೊಂದರೆ ಕೊಡುತ್ತಿದ್ದಾರೆ ಮತ್ತು ಅಟೆಂಪ್ಟ್ -ಟು-ಮರ್ಡರ್ ಮಾಡುತ್ತಿದ್ದಾರೆ. ನನಗೆ ತಿಳಿದು ಬಂದ ವಿಷಯ ಏನೆಂದರೆ , ಇದಕ್ಕೆ ರಾಜಕೀಯ ವ್ಯಕ್ತಿಗಳ ಆಶೀರ್ವಾದ ಈ ಭೀಮಶ್ಯ ಮತ್ತು ಅವನ ಸಂಗಡಿಗರಿಗೆ ಇದೆ. ಆದ್ದರಿಂದ ಮಾನ್ಯ ಗೃಹ ಸಚಿವರು ಇದನ್ನು ವೈಯಕ್ತಿಕ ದ್ವೇಷದಿಂದ ಆದ ಮರ್ಡರ್ ಎಂದು ತಿಳಿದುಕೊಳ್ಳದೆ, ಇದನ್ನು ಸಿ. ಓ. ಡಿ. ಗೆ ವಹಿಸಿ ಕೊಟ್ಟರೆ ಒಳ್ಳೆಯದು. ಆಗ ಇದರ ಹಿಂದೆ ರಾಜಕೀಯ ವ್ಯಕ್ತಿಗಳು ಯಾರು ಇದ್ದಾರೆ ಎಂಬ ನಿಜಾಂಶ ಹೊರಗೆ ಬರುತ್ತದೆ. ಇದರ ಬಗ್ಗೆ ಮಾನ್ಯ ಗೃಹ ಮಂತ್ರಿಗಳು ಸೀರಿಯಸ್ ಆಗಿ ಗಮನಕ್ಕೆ ತೆಗೆದುಕೊಂಡು ಕ್ರಮ ಜರುಗಿಸಬೇಕು. ಇದರ ಹಿನ್ನೆಲೆ ಬಹಳ ಇದೆ. ಇದನ್ನು ಸಿ. ಓ. ಡಿ. ಗೆ ಒಪ್ಪಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಈಗಾಗಲೆ ಪೋಲೀಸ್‌ರವರು ತನಿಖೆಯನ್ನು ಮಾಡಿ ಇಬ್ಬರನ್ನು ಗುರುತಿಸಿದ್ದಾರೆ. ಅವರಿಬ್ಬರಲ್ಲಿ ಈಗಾಗಲೇ ಒಬ್ಬರನ್ನು ಹಿಡಿದಿದ್ದಾರೆ. ಇನ್ನೊಬ್ಬರನ್ನು ಪತ್ತೆ ಹಚ್ಚುವ ಎಲ್ಲಾ ಪ್ರಯತ್ನ ಕೂಡ ನಡೆದಿದೆ. ಅವರು ಅಲ್ಲೇ ಆ ಆರೋಪಿ ಓಡಾಡುತ್ತಿದ್ದರೂ ಅವರನ್ನು ಹಿಡಿಯುತ್ತಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ತಕ್ಷಣ ಡಿ. ಜಿ. ಪಿ. ಯವರಿಗೆ ಹೇಳುತ್ತೇನೆ ಮತ್ತು ಈಗ ಅಲ್ಲಿ ಭಾಲ್ಕಿಗೆ ಹೊಸದಾಗಿ ಡಿವೈ ಎಸ್‌ಪಿಯವರು ಬಂದಿದ್ದಾರೆ. ನನಗನ್ನಿಸಿದ ಮಟ್ಟಿಗೆ ಅವರು ಐ ಪಿ ಎಸ್. ಆಫೀಸರ್ ಇದ್ದಾರೆ ಅವರು ಯಾರಿಗೂ ಪರಿಚಯವೂ ಇಲ್ಲ, ಯಾರಿಗೂ ಸಂಬಂಧವೂ ಇಲ್ಲ, ಯಾರೂ ಕೂಡ ಅವರ ಮೇಲೆ ಯಾರೂ ಕೂಡ ಅವರ ಮೇಲೆ ಪ್ರಭಾವ ಬೀರುವ ಪ್ರಶ್ನೆಯೂ ಉದ್ಭವಿಸುವುದಿಲ್ಲ. ಅದಕ್ಕಾಗಿ ಅಲ್ಲಿ ಹೊಸದಾಗಿ ನಾವೇನು ಡಿವೈ ಎಸ್‌ಪಿ-ಯವರನ್ನು ಪೋಸ್ಟ್ ಮಾಡಿದ್ದೇವೆ. ಅವರ ಮುಖಾಂತರವೇ ಈ ಇನ್‌ವೆಸ್ಟಿಗೇಷನನ್ನು ಮಾಡಿ ಆದಷ್ಟು ಬೇಗನೆ ಆ ವ್ಯಕ್ತಿಯನ್ನು ಕಂಡು ಹಿಡಿಯುವುದಕ್ಕೆ ಪ್ರಯತ್ನಿಸುತ್ತೇವೆ. ಇದರಲ್ಲಿ ಯಾರೇ ಇನ್ ವಾಲ್ವ್ ಆಗಿರಲಿ, ರಾಜಕೀಯ ವ್ಯಕ್ತಿಗಳೇ ಇರಲಿ, ಅಥವಾ ವ್ಯಯಕ್ತಿಕವಾದ ಜಗಳವೇ ಇರಲಿ, ಎಲ್ಲವೂ ಕೂಡ ಬಯಲಿಗೆ ಬರುತ್ತದೆ. ಅಲ್ಲಿಗೆ ಮೊನ್ನೆ ತಾನೇ ನಾವು ದಕ್ಷ ಅಧಿಕಾರಿಗಳನ್ನು ಹಾಕಿದ್ದೇವೆ. ಆದಷ್ಟು ಬೇಗನೆ ಇದರ ಬಗ್ಗೆ ತನಿಖೆಯನ್ನು ನಡೆಸಿ ಸಂಬಂಧಪಟ್ಟಿರುವ ವ್ಯಕ್ತಿಯನ್ನು ಹಿಡಿಯುವ ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆ. ಮಾನ್ಯ ಸದಸ್ಯರು ನನ್ನ ಹತ್ತಿರ ಬಂದು ವಿಚಾರ ಹೇಳಿದ್ದಾರೆ. ಡಿಜಿಪಿ-ಯವರನ್ನು ನಾನೇ ಫೋನ್ ಮಾಡಿ ಅಲ್ಲಿಗೆ ಕಳುಹಿಸಿದ್ದೇನೆ. ಇದರ ಬಗ್ಗೆ ಸ್ವತಃ ನಾನೇ ಎಸ್‌ಪಿ-ಯವರಿಗೆ ಫೋನ್ ಮಾಡಿ ಹೇಳಿದ್ದೇನೆ. ಎಲ್ಲಾ ಕ್ರಮಗಳನ್ನೂ ನಾವು ಜರುಗಿಸುತ್ತಿದ್ದೇವೆ. ಅದಕ್ಕಾಗಿ ಅವರು ಯಾವ ಸಂಶಯವನ್ನು ಇಟ್ಟುಕೊಳ್ಳುವುದು ಬೇಡ. ಆದಷ್ಟೂ ಬೇಗನೆ ಒಂದು ಕೇಸನ್ನು ಮುಕ್ತಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆರೋಪಿಗಳ ಮೇಲೆ ಛಾರ್ಜ್ ಸೀಟ್ ಹಾಕುವುದನ್ನು ಕೂಡ ನಾವು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಓಂ ಪ್ರಕಾಶ್ ರೊಟ್ಟಿ ಎನ್ನುವವರಿಗೆ ನೀವು ರಕ್ಷಣೆಯನ್ನು ಕೊಡಬೇಕು. ಆ ಭೀಮಶ್ಯ ಗ್ಯಾಂಗ್‌ನವರೇ ಇದನ್ನು ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇಂಥ ಗ್ಯಾಂಗ್‌ನವರನ್ನು ಹತ್ತಿಕ್ಕುವ ಎಲ್ಲ ಪ್ರಯತ್ನವನ್ನು ನಾವು ಮಾಡುತ್ತೇವೆ. ಸಮಾಜ ಸೇವಕರಾದ ಓಂ ಪ್ರಕಾಶ್ ರೊಟ್ಟಿ-ಯವರಿಗೆ ರಕ್ಷಣೆ ಕೊಡುವುದಕ್ಕೆ ಅಧಿಕಾರಿಗಳಿಗೆ ನಾನು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಎರಡನೇ ಸಲ ಅಟೆಂಪ್ಟ್ -ಟು-ಮರ್ಡರ್ ಆಗಿದೆ ಆರೋಪಿ ಒಂದು ಕೇಸ್‌ನಲ್ಲಿ ಆಂಟಿಸಿಪೇಟರಿ ಬೇಲ್ ತೆಗೆದುಕೊಂಡಿದ್ದಾನೆ. ಇನ್ನೊಂದು ಕೇಸ್‌ನಲ್ಲಿ ಆಂಟಿಸಿಪೇಟರಿ ಬೇಲ್ ಇಲ್ಲ. ಆರೋಪಿಗಳು ಸಾರ್ವಜನಿಕವಾಗಿ ಓಡಾಡುತ್ತಿದ್ದಾರೆ. ಯಾರು ಅಟೆಂಪ್ಟ್ -ಟು-ಮರ್ಡರ್ ಮಾಡಿದ್ದಾರೆ, ಅವರನ್ನು ದಯವಿಟ್ಟು ಆದಷ್ಟು ಬೇಗ ಅರೆಸ್ಟ್ ಮಾಡಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಹೇಳುವ ವಿಚಾರ ಇದಕ್ಕೆ ಸಂಬಂಧಪಟ್ಟಿರುವುದಿಲ್ಲ. ಆದರೆ ಇದೇ ಗ್ಯಾಂಗ್‌ನವರು ಅದನ್ನು ಮಾಡಿದ್ದಾರೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ. ನಾನು ಇವತ್ತೇ ಡಿಜಿಪಿ -ಯವರಿಗೆ ಹೇಳಿ ಅಲ್ಲಿರುವ ಡಿವೈ ಎಸ್‌ಪಿ ಮತ್ತು ಎಸ್ ಪಿ- ಯವರಿಗೆ ಇದರ ಬಗ್ಗೆ ಕ್ರಮವನ್ನು ಜರುಗಿಸುವುದಕ್ಕೆ ಮತ್ತು ಅವರಿಗೆ ಸೂಕ್ತವಾದ ರಕ್ಷಣೆಯನ್ನು ಕೊಡುವುದಕ್ಕೆ ಹೇಳುತ್ತೇನೆ.

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ಇದರ ಬಗ್ಗೆ ಸಮಗ್ರವಾದ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಪ್ರಕಾಶ ಖಂಡ್ರೆ :- ಮಾನ್ಯ ಅಧ್ಯಕ್ಷರೇ, ಭಾಲ್ಕಿಯಲ್ಲಿ ಇದೇ ಗ್ಯಾಂಗ್‌ನವರು ವಿತೌಟ್ ಲೈಸನ್ಸ್ ರಿವಾಲ್ವರನ್ನು ತೆಗೆದುಕೊಂಡು ಓಡಾಡುತ್ತಿದ್ದಾರೆ. ನಾನು ಈ ವಿಚಾರವನ್ನು ಮಾನ್ಯ ಮಂತ್ರಿಗಳಿಗೂ ತಿಳಿಸಿದ್ದೇನೆ. ಡಿಜಿಪಿ ಯವರಿಗೂ ತಿಳಿಸಿದ್ದೇನೆ. ಭಾಲ್ಕಿಯಲ್ಲಿ ಈ ರೀತಿ ಮರ್ಡರ್ ನಡೆಯುತ್ತಿದೆ ಅಲ್ಲಿ ಯಾರೂ ನೆಮ್ಮದಿಯಿಂದ ಇರುವುದಕ್ಕೆ ಸಾಧ್ಯವೇ ಇಲ್ಲ. ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು:- ಡಿಜಿಪಿ-ಯವರ ಹತ್ತಿರ ಮಾತನಾಡಿ ಇದರ ಬಗ್ಗೆ ಸಮಗ್ರ ತನಿಖೆಯನ್ನು ಮಾಡಿಸುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರಲ್ಲ. ಅವರು ಮಾಡುತ್ತಾರೆ ಬಿಡಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಲೈಸನ್ಸ್ ಇಲ್ಲದೆ ರಿವಾಲ್ವರ್ ಅನ್ನು ಹಿಡಿದುಕೊಂಡು ಅವರೆಲ್ಲಾ ಓಡಾಡುತ್ತಿದ್ದಾರೆ. ಅಲ್ಲಿ ಪರಿಸ್ಥಿತಿ ಗಂಭೀರವಾಗಿದೆ.

ಅಧ್ಯಕ್ಷರು:- ಅದರ ಬಗ್ಗೆ ಎನ್‌ಕ್ವೈರಿ ಮಾಡಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಈಗ ಅವರು ಯಾವ ಯಾವ ಸಂದರ್ಭಗಳಲ್ಲಿ ಬಂದಿದ್ದಾರೆ, ಪ್ರತಿಯೊಂದು ಸಲವೂ ನಾನು ಅವರಿಗೆ ರೆಸ್ಪಾನ್ಸ್ ಕೊಟ್ಟಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ನಾನೇ ನೇರವಾಗಿ ಮಾತನಾಡಿದ್ದೇನೆ. ಈಗಾಗಲೇ ಒಬ್ಬನನ್ನು ಹಿಡಿದಿದ್ದಾರೆ. ಇನ್ನೊಬ್ಬ ಕೂಡ ಅಲ್ಲೇ ಅಡ್ಡಾಡುತ್ತಿದ್ದಾನೆ. ಅವನನ್ನು ಹಿಡಿಯುತ್ತಿಲ್ಲ ಎನ್ನತಕ್ಕ ವಿಚಾರವನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದಕ್ಕೆ ನಾನು ಈಗಾಗಲೇ ಹೇಳಿದೆ, ತಕ್ಷಣ ನಾನು ಡಿಜಿಪಿ ಯವರಿಗೆ ಹೇಳುತ್ತೇನೆ. ಅಲ್ಲಿರತಕ್ಕ ಒಬ್ಬ ಐಪಿ ಎಸ್ ಆಫೀಸರ್‌ಗೆ ನಾವು ಹೊಸದಾಗಿ ಈಗ ಡಿವೈ ಎಸ್‌ಪಿ ಎಂದು ಛಾರ್ಜ್ ಕೊಟ್ಟಿದ್ದೇವೆ. ಅವರು ಪ್ರೊಮೋಷನ್ ಆಫೀಸರ್, ಅವರು ಯಾರಿಗೂ ಸಂಬಂಧಪಟ್ಟವರಲ್ಲ, ಯಾರ ಇನ್‌ಫ್ಲುಯೆನ್ಸ್‌ಗೂ ಒಳಗಾಗತಕ್ಕ ಅಧಿಕಾರಿಯೂ ಅಲ್ಲ. ಅವರ ಮುಖಾಂತರ ಈ ಒಂದು ಕೇಸನ್ನು ಡೀಲ್ ಮಾಡಿ ಸಂಬಂಧಪಟ್ಟವರ ಮೇಲೆ ನಾವು ಆಕ್ಷನ್ ತೆಗೆದುಕೊಳ್ಳುವ ವಿಚಾರದ ಬಗ್ಗೆ ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ.